# ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಶಹಾಪುರ

ಉಪಸ್ಥಿತರುಃ ಶ್ರೀ ಪ್ರಭು ಎನ್. ಬಡಿಗೇರ

ಬಿ.ಎ. ಎಲ್‌ಎಲ್.ಬಿ. (ವಿಶೇಷ)

ಹಿರಿಯ ಸಿವಿಲ್ ನ್ಯಾಯಾಧೀಶರು, ಶಹಾಪುರ.

## ಆರ್.ಎ. ನಂ. 14/2017

## ದಿನಾಂಕಃ 31ನೇ ಮೇ-2018

**ಮೇಲ್ಮನವಿದಾರ/ವಾದಿಃ**

ಶಂಕರಪ್ಪ ತಂದೆಃ ದೊಡ್ಡ ಭೀಮರಾಯ ಮುಲಿಕೇರಿ, ವಯಸ್ಸುಃ 44 ವರ್ಷ, ಉದ್ಯೋಗಃ ವ್ಯವಸಾಯ, ವಾಸಸ್ಥಳಃ ಹಂಚನಾಳ, ತಾಃ ಶಹಾಪುರ, ಜಿಲ್ಲಾಃ ಯಾದಗಿರಿ.

(ಮೇಲ್ಮವಿದಾರರ ಪರವಾಗಿ ಶ್ರೀ ಹೆಚ್.ಎಸ್.ಎಮ್. ವಕೀಲರು)

//ವಿರುದ್ಧ//

**ಎದುರುದಾರರು/ಪ್ರತಿವಾದಿಯರುಃ**

1. ಕರ್ನಾಟಕ ರಾಜ್ಯ ಪ್ರತಿನಿಧಿಸುವವರು ಜಿಲ್ಲಾಧಿಕಾರಿಗಳು ಯಾದಗಿರಿ.
2. ಕಂದಾಯ ನಿರೀಕ್ಷಕರು ಹಯ್ಯಾಳ(ಬಿ), ಕಂದಾಯ ಹೊಬಳಿ ಹಯ್ಯಾಳ, ತಾಃ ಶಹಾಪುರ, ಜಿಲ್ಲಾಃ ಯಾದಗಿರಿ.
3. ಗ್ರಾಮ ಲೆಕ್ಕಾಧಿಕಾರಿಗಳು, ಹಯ್ಯಾಳ(ಬಿ), ತಾಃ ಶಹಾಪುರ, ಜಿಲ್ಲಾಃ ಯಾದಗಿರಿ.

(ಎದುರುದಾರರ ಪರವಾಗಿ ಮಾನ್ಯ ಎ.ಜಿ.ಪಿಯವರು)

| | | |
|---|---|---|
| 01 | ಮೇಲ್ಮನವಿ ನಂ. ದಾಖಲಾದ ದಿನಾಂಕ | 28-03-2017 |
| 02 | ಮೇಲ್ಮನವಿ ಸ್ವರೂಪ | ಹೆಚ್ಚುವರಿ ದಿವಾಣಿ ನ್ಯಾಯಾಧಿಶರು, ಶಹಾಪುರ ಇವರು ದಿನಾಂಕಃ 24-03-2016ರಂದು ಅಸಲು ದಾವೆ ಸಂಖ್ಯೆ 01/2013ರಲ್ಲಿ ಹೊರಡಿಸಿದ ತೀರ್ಪು ಮತ್ತು ಡಿಕ್ರಿ ರಹಿತ ಪಡಿಸುವಂತೆ ಪರಿಹಾರ ಕೊರಿ ಸಲ್ಲಿಸಿದ ಮೇಲ್ಮನವಿ. |
| 03 | ತೀರ್ಪು ಘೋಷಣೆ ಮಾಡಿದ ದಿನಾಂಕ | 31-05-2018 |
| 04 | ಒಟ್ಟು ಕಾಲಾವಧಿ | ವರ್ಷ 01 ತಿಂಗಳು 02 ದಿವಸ 03 |

# ತೀರ್ಪು

ಜ್ಞಾತ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು, ಶಹಾಪುರ ಇವರು ದಿನಾಂಕ 24-03-2016ರಂದು ವಾದಿಯು ಸಲ್ಲಿಸಿದಂತಹ ಅಸಲು ದಾವಾ ನಂ. 01/2013ರಲ್ಲಿ ಹೊರಡಿಸಿದ ತೀರ್ಪು ಮತ್ತು ಡಿಕ್ರಿಗೆ ಬಾಧಿತರಾಗಿ, ಸದರಿ ದಾವೆಯಲ್ಲಿ ಆದಂತಹ ತೀರ್ಪನ್ನು ರಹಿತ ಪಡಿಸಬೇಕು ಅಂತಾ ಪರಿಹಾರ ಕೋರಿ ಪ್ರಸ್ತುತ ಈ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

2. ಸದರಿ ಮೇಲ್ಮವಿಯನ್ನು ದಾಖಲಿಸಿದ ನಂತರ ಈ ನ್ಯಾಯಾಲಯದಿಂದ ಎದುರುದಾರರಿಗೆ ಮೇಲ್ಮವಿಯ ನೋಟೀಸನ್ನು ಕಳುಹಿಸಿಕೊಡಲಾಗಿ, ಎದುರುದಾರರು ಎ.ಜಿ.ಪಿಯವರ ಮೂಲಕ ಹಾಜರಾಗಿರುತ್ತಾರೆ. ಆದರೆ ಮೇಲ್ಮನವಿಗೆ ಯಾವುದೇ ರೀತಿಯ ಆಕ್ಷೇಪಣೆ ಅಥವಾ ಎದುರು ತಕರಾರು ಸಲ್ಲಿಸಿರುವುದಿಲ್ಲ.

3. ಪ್ರಕರಣವನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳುವ ಸಲುವಾಗಿ ಮೂಲ ದಾವೆಯಲ್ಲಿರುವಂತಹ ಪಕ್ಷಗಾರರ ಶ್ರೇಣಿಯನ್ನೆ ಮೇಲ್ಮನವಿಯಲ್ಲಿ ಉಪಯೋಗಿಸಲಾಗಿದೆ.

**4. ವಾದ ಪತ್ರದ ಸಂಕ್ಷಿಪ್ತ ವಿವರಣೆ ಈ ಕೆಳಗಿನಂತಿದೆಃ**

ವಾದಿ ಮೂಲ ದಾವೆ ನಂ. 01/2013ನ್ನು ಪ್ರತಿವಾದಿ ವಿರುದ್ಧ ಹಯ್ಯಾಳ (ಬಿ) ಗ್ರಾಮದ ಜಮೀನು ಸರ್ವೆ ನಂ. 240/ಎ 06 ಎಕರೆ 37 ಗುಂಟೆ ನೇದ್ದಕ್ಕೆ ಸಂಬಂಧಪಟ್ಟಂತೆ ತಾನು ಮಾಲೀಕ ಮತ್ತು ಸ್ವಾಧೀನದಾರನಿರುತ್ತೇನೆ ಅಂತಾ ಘೋಷಿಸಿ ಪ್ರತಿವಾದಿಯರಾಗಲಿ ವ, ಅವರ ತರ್ಫೆ ಬೇರೆಯಾರೇ ಆಗಲಿ ವಾದಿಯ ದಾವಾದಾಸ್ತಿಯ ಶಾಂತತಾ ರೀತಿಯ ವಹಿವಾಟು ಉಪಭೋಗಕ್ಕೆ ಅಡ್ಡಿ ಆತಂಕ ವ, ಹರ್ಕತ್ ಮಾಡದಂತೆ ಶಾಶ್ವತ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡುವಂತೆ ದಾವಾದಾಸ್ತಿಯ ಪಹಣಿ ಪತ್ರಿಕೆಯಲ್ಲಿ ವಾದಿಯ ಹೆಸರನ್ನು ಸರಿಪಡಿಸುವಂತೆ ಪರಿಹಾರ ಕೋರಿ ಈ ದಾವೆಯನ್ನು ದಾಖಲಿಸಿರುತ್ತಾರೆ ಅಂತಾ ಆಧರಿಸಿರುತ್ತಾರೆ.

**5. ದಾವೆಯ ಸಂಕ್ಷಿಪ್ತ ವಿವರ ಈ ಕೆಳಗಿನಂತೆ ಇರುತ್ತದೆ.**

ವಾದಿ ಆಧರಿಸುವುದೇನೆಂದರೆ, ಮೊದಲು ದಾವಾದಾಸ್ತಿಗೆ ತಮ್ಮ ತಂದೆ ಮಾಲೀಕ ಮತ್ತು ಸ್ವಾಧೀನದಾರನಿದ್ದ, ಆತ ಮರಣ ಹೊಂದಿದ ನಂತರ ತಾನು ದಾವಾದಾಸ್ತಿಗೆ ಮಾಲೀಕ ಮತ್ತು ಸ್ವಾಧೀನದಾರನಿರುತ್ತೇನೆ. ಈ ಸಂಗತಿ ಕಾಸರಾ ಪಹಣಿಯಲ್ಲಿ ನಮೂದಿರುತ್ತದೆ. ಆದರೆ ಪ್ರತಿವಾದಿ ನಂ. 2 ಮತ್ತು 3ರವರು ವಾದಿಗೆ ಗೊತ್ತಿಲ್ಲದಂತೆ ಆತನ ಬೆನ್ನು ಹಿಂದೆ ವಾದಿಯ ಹೆಸರನ್ನು ರದ್ದು ಮಾಡಿ, ಸರಕಾರ ಅಂತಾ ನಮೂದು ಮಾಡಿರುತ್ತಾರೆ. ಹೀಗಾಗಿ ಸಿಪಿಸಿ ಕಲಂ 80ರ ಅಡಿ ಪ್ರತಿವಾದಿಗೆ ನೋಟೀಸ ಕೊಡಲಾಗಿರುತ್ತದೆ. ಸದರಿ ದಾವಾದಾಸ್ತಿಗೆ ವಾದಿ ಮಾಲೀಕನಿರುತ್ತಾನೆ ಅಂತಾ ಠರಾಯಿಸಬೇಕು ಅಂತಾ ದಾವೆ ಸಲ್ಲಿಸಿರುತ್ತಾರೆ.

ದಾವೆ ಸಲ್ಲಿಸದ ನಂತರ ಪ್ರತಿವಾದಿಯರು ಎ.ಜಿ.ಪಿರವರ ಮುಖಾಂತರ ಹಾಜರಾಗಿ 2ನೇ ಪ್ರತಿವಾದಿ ಪ್ರತಿವಾದ ಪತ್ರ ಸಲ್ಲಿಸಿರುತ್ತಾನೆ ಮತ್ತು ವಾದಿ ಆಧರಿಸಿದಂತಹ ವಾದ ಪತ್ರದ ಸಂಗತಿಗಳನ್ನು ಅಲ್ಲಗಳೆದಿರುತ್ತಾರೆ. ಹಯ್ಯಾಳ(ಬಿ) ಗ್ರಾಮದ ಜಮೀನು ಸರ್ವೆ ನಂ. 240, 11 ಎಕರೆ 33 ಗುಂಟೆ ಇದ್ದು, 1981-82ರಲ್ಲಿ 04 ಎಕರೆ 36 ಗುಂಟೆಯನ್ನು ತಹಶಿಲ್ದಾರವರ ಆದೇಶದಂತೆ ಬಾಲ ದಂಡಪ್ಪ, ಲಿಂಗಣ್ಣ ಹಂಚಿನಾಳ ಇರವರಿಗೆ ಮಂಜೂರಾಗಿದ್ದು, ಉಳಿದ ಕ್ಷೇತ್ರ 06 ಎಕರೆ 37 ಗುಂಟೆ ನೇದ್ದಕ್ಕೆ 240/ಅ ಎಂದು, ಮೇಲೆ ಹೇಳಿದ ವ್ಯಕ್ತಿಗಳಿಗೆ ಹಂಚಲ್ಪಟ್ಟ ಜಮೀನು 240/ಆ ಅಂತಾ ಖಾತೆಯಾಗಿರುತ್ತದೆ. ಸದರಿ ದಾವಾದಾಸ್ತಿ ವಾದಿಗೆ ಸಂಬಂಧವಿರುವುದಿಲ್ಲ ಆದ್ದರಿಂದ ದಾವೆಯನ್ನು ವಜಾ ಮಾಡಬೇಕು ಅಂತಾ ವಿನಂತಿಸಿರುತ್ತಾರೆ.

6. ಕೆಳ ನ್ಯಾಯಾಲಯವು ಈ ಕೆಳಗಿನಂತೆ ವಿವಾದಾಂಶಗಳನ್ನು ರಚಿಸಿರುತ್ತದೆ. ಅವುಗಳು ಈ ಕೆಳಗಿನಂತಿವೆಃ

## ISSUES

1. Whether the plaintiff prove that he is owner and possession of the suit property?
2. Whether the plaintiff further prove that the alieged interference by the defendants?
3. Whether the Defendant No.2 prove that the suit property is Government land?
4. Whether plaintiff is entitled to the reliefs as prayed for ?
5. What Order or Decree ?

7. ವಾದಿಯು ತನ್ನ ಪ್ರಕರಣವನ್ನು ಸಾಬೀತು ಪಡಿಸಲು ತಾನು ಪಿ.ಡಬ್ಲೂ-1 ರಿಂದ 3 ಅಂತಾ ಸಾಕ್ಷಿ ನುಡಿದು ತಮ್ಮ ಪರವಾಗಿ ನಿ.ಪಿ-1 ರಿಂದ 5 ದಾಖಲೆಗಳನ್ನು ಹಾಜರುಪಡಿಸಿದ್ದು, ಪ್ರತಿವಾದಿ ಪರವಾಗಿ ಯಾರು ಸಾಕ್ಷ್ಯ ನುಡಿದಿರುವುದಿಲ್ಲ.

8. ಉಭಯ ಪಕ್ಷಗಾರರ ಪರ ವಕೀಲರ ವಾದ-ಪ್ರತಿವಾದ ಕೇಳಿದ ನಂತರ, ಕೆಳ ನ್ಯಾಯಾಲಯವು ವಿವಾದಾಂಶ ಸಂಖ್ಯೆ 1 ರಿಂದ 4ನ್ನು ನಕಾರಾತ್ಮಕವಾಗಿ ಎಂದು ಉತ್ತರಿಸಿರುತ್ತದೆ. ಕೊನೆಯದಾಗಿ ದಾವೆಯನ್ನು ವಜಾಗೊಳಿಸಿರುತ್ತದೆ.

9. ಕೆಳ ನ್ಯಾಯಾಲಯದ ಡಿಕ್ರಿ ಮತ್ತು ತೀರ್ಪಿನಿಂದ ನೊಂದ ವಾದಿಯು ಸದರಿ ತೀರ್ಪು ಮತ್ತು ಡಿಕ್ರಿಯನ್ನು ಈ ಕೆಳಗಿನ ಕಾರಣಗಳ ಮೇರೆಗೆ ಈ ಮೇಲ್ಮನವಿಯಲ್ಲಿ ಪ್ರಶ್ನಿಸಿದ್ದು, ಆ ಕಾರಣಗಳು ಈ ಕೆಳಗಿನಂತೆ ಇರುತ್ತವೆ.

## -ಃಮೇಲ್ಮನವಿಯಲ್ಲಿ ನಮೂದಿಸಿದ ಕಾರಣಗಳುಃ-

10. ಕೆಳ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿ ಸಂಗತಿ ಹಾಗೂ ಕಾನೂನಿಗೆ ವಿರುದ್ಧವಾಗಿರುತ್ತದೆ. ಅಲ್ಲದೇ ವಿವಾದಾಂಶಗಳ ಮೇಲೆ ನೀಡಿದಂತಹ ಉತ್ತರ ಹಾಗೂ ಕಾರಣಗಳು ವಾದ ಪ್ರತಿವಾದ ಪತ್ರಕ್ಕೆ ವಿರುದ್ಧವಾಗಿರುತ್ತದೆ. ಕೆಳ ನ್ಯಾಯಾಲಯವು ಪ್ರಕರಣವನ್ನು ಇತ್ಯರ್ಥ ಪಡಿಸುವ ಸಮಯದಲ್ಲಿ ತನ್ನ ನ್ಯಾಯಿಕ ಜ್ಞಾನವನ್ನು ಉಪಯೋಗಿಸಿರುವುದಿಲ್ಲ. ಪ್ರತಿವಾದಿ ಪರವಾಗಿ ಸಾಕ್ಷಿ ಇರದೇ ಇದ್ದರೂ ಸಹಿತ ದಾವೆ ಡಿಕ್ರಿ ಮಾಡಿರುತ್ತಾರೆ. ವಾದಿ ಪರವಾಗಿ ಸಾಕಷ್ಟು ಸಾಕ್ಷ್ಯಾಧಾರಗಳು ಇದ್ದರೂ ಸಹಿತ ದಾವೆ ವಜಾ ಮಾಡಿದ್ದು ಗೈರ ಕಾಯ್ದೆಶೀರ್ ಇರುತ್ತದೆ ಮತ್ತು ಪಹಣಿ ಪತ್ರಿಕೆಯಲ್ಲಿ ಸರಕಾರಿ ಖಾರಿಜ ಖಾತಾ ಅಂತಾ ತಪ್ಪಾಗಿ ನಮೂದಿಸಿರುತ್ತಾರೆ. ಹೀಗಾಗಿ ಈ ಕಾರಣಗಳಿಂದಾಗಿ ಕೆಳ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿ ರದ್ದು ಪಡಿಸಲು ಯೋಗ್ಯವಿರುತ್ತದೆ. ಆದ್ದರಿಂದ ರದ್ದು ಪಡಿಸಿ ದಾವೆಯನ್ನು ಡಿಕ್ರಿ ಮಾಡಬೇಕು ಅಂತಾ ವಿನಂತಿಸಿರುತ್ತಾರೆ.

11. ಉಭಯ ಪಕ್ಷಗಾರರ ವಾದ-ಪ್ರತಿವಾದವನ್ನು ಆಲಿಸಿದ ನಂತರ ಮೇಲ್ಮನವಿಯ ನ್ಯಾಯಯುತ ಇತ್ಯರ್ಥಕ್ಕಾಗಿ ಈ ಕೆಳಕಾಣಿಸಿದ ಅಂಶಗಳು ನನ್ನ ಪರಿಗಣನೆಗೆ ಉದ್ಭವಿಸಿರುತ್ತವೆಃ

## ಃಅಂಶಗಳುಃ

1. ಕೆಳ ನ್ಯಾಯಾಲಯವು ವಿವಾದಾಂಶ ನಂ. 1 ರಿಂದ 4ರ ಮೇಲೆ ಕೊಟ್ಟಂತಹ ಉತ್ತರ ತಪ್ಪಿರುತ್ತದೆಯೇ?
2. ಕೆಳನ್ಯಾಯಾಲಯವು ಹೊರಡಿಸಿದ ತೀರ್ಪು ಮತ್ತು ಡಿಕ್ರಿಯಲ್ಲಿ ಈ ನ್ಯಾಯಾಲಯದ ಮಧ್ಯ ಪ್ರವೇಶಿಸುವ ಅವಶ್ಯ ಇರುತ್ತದೆಯೇ?
3. ಹಾಗಾದರೆ ಯಾವ ಆದೇಶ?

12. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತೆ ಇರುತ್ತದೆ.

ಅಂಶ ಸಂಖ್ಯೆ 1 ಃ ಸಕಾರಾತ್ಮಕವಾಗಿ
ಅಂಶ ಸಂಖ್ಯೆ 2 ಃ ಸಕಾರಾತ್ಮಕವಾಗಿ
ಅಂಶ ಸಂಖ್ಯೆ 3 ಃ ಈ ಕೆಳಗಿನ ಕಾರಣಗಳೊಂದಿಗೆ ಅಂತಿಮ ಆದೇಶದಂತೆಃ

## ಃಕಾರಣಗಳುಃ

13. ಅಂಶ ಸಂಖ್ಯೆ 1 ಮತ್ತು 2ಃ ಈ ಎರಡು ಅಂಶಗಳು ಒಂದಕ್ಕೊಂದು ಆಂತರಿಕ ಸಂಬಂಧವನ್ನು ಹೊಂದಿರುವುದರಿಂದ ವಿಷಯದ ಪುನರಾವರ್ತನೆ ತಪ್ಪಿಸುವ ಸಲುವಾಗಿ ಈ ಎರಡು ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಂಡಿರುತ್ತೇನೆ.

14. ಈ ಪ್ರಕರಣದ ವಾದ ಪ್ರತಿವಾದ ಪತ್ರದ ಸಂಗತಿಗಳನ್ನು ಹಾಗೂ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಧಾರಗಳನ್ನು ಸಂಪೂರ್ಣ ಸಾಕ್ಷ್ಯಾಧಾರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಹಯ್ಯಾಳ(ಬಿ) ಗ್ರಾಮದ ಸರ್ವೆ ನಂ. 240 ಮೊದಲು ಬಾಲದಂಡಪ್ಪ ಅಂದರೆ ವಾದಿಯ ಅಜ್ಜನ ಹೆಸರು ಇದ್ದ ಬಗ್ಗೆ ಹಯ್ಯಾಳ (ಬಿ) ಗ್ರಾಮದ ಶೇಷಲಾ ಪಹಣಿ ಪತ್ರಿಕೆಯಲ್ಲಿ ನಮೂದಿರುತ್ತದೆ. ನಂತರ ವಾದಿಯ ತಂದೆ ಹೆಸರು ಸಹಿತ ನಮೂದಿರುತ್ತದೆ. ಆದರೆ ಈ ಸಂಗತಿಯನ್ನು ಪ್ರತಿವಾದಿ ಮರೆಮಾಚಿ ವಾದಿಯ ತಂದೆ ಹೆಸರನ್ನು ರದ್ದು ಪಡಿಸಿ ಸರಕಾರ ಅಂತಾ ನಮೂದು ಪಡಿಸಿರುವುದ್ದು ಗೈರ ಆದೇಶವಿರುತ್ತದೆ. ಸದರಿ ದಾಖಲೆಗಳನ್ನು ಗಮನಿಸಿದಾಗ ಏಕೆ

ವಾದಿಯ ತಂದೆಯ ಹೆಸರು ರದ್ದು ಪಡಿಸಲಾಯಿತು ಎನ್ನುವ ಬಗ್ಗೆ ಸೂಕ್ತವಾದ ಮುಟೇಶನ ಇರುವುದಿಲ್ಲ ಮತ್ತು ಪ್ರತಿವಾದಿ ಸಹಿತ ತನ್ನ ಪ್ರತಿವಾದ ಪತ್ರದಲ್ಲಿ ಈ ಕುರಿತು ಎನ್ನನ್ನೂ ಹೇಳಿರುವುದಿಲ್ಲ. ಸದರಿ ದಾವಾದಾಸ್ತಿ ಬೇರೆಯವರಿಗೆ ಮಂಜೂರಾದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಹೀಗಿದ್ದರೂ ಸಹಿತ ಕೆಳ ನ್ಯಾಯಾಲಯವು ಈ ಯಾವುದೇ ಸಂಗತಿಗಳನ್ನು ಗಮನಿಸದೇ ತಮ್ಮ ತೀರ್ಪಿನಲ್ಲಿ ವಾದಿ ಸ್ವಾಧೀನದಲ್ಲಿ ಇರುವುದಿಲ್ಲ ಹಾಗೂ ವಾದಿ ದಾವಾದಾಸ್ತಿಯ ಮಾಲೀಕನಲ್ಲ ಅಂತಾ ತಪ್ಪು ನಿರ್ಣಯ ತಾಳಿರುತ್ತಾರೆ. ವಾದಿಯ ತಂದೆ ಹೆಸರು ಮೊದಲು ನಮೂದು ಇದ್ದರೂ ಸಹಿತ ಅದನ್ನು ಸಕಾರಣವಿಲ್ಲದೇ ರದ್ದು ಮಾಡಿದನು ಕೆಳ ನ್ಯಾಯಾಲಯವು ಗಂಭೀರವಾಗಿ ಚಿಂತಿಸಿರುವುದಿಲ್ಲ. ಹೀಗಾಗಿ ಕೆಳ ನ್ಯಾಯಾಲಯವು ವಿವಾದಾಂಶ ನಂ. 1 ಮತ್ತು 2ರ ಮೇಲೆ ತಪ್ಪು ಅಭಿಪ್ರಾಯ ತಾಳಿರುವುದರಿಂದ, ಈ ನ್ಯಾಯಾಲಯದ ಹಸ್ತಕ್ಷೇಪ ಅತೀ ಅವಶ್ಯವಾಗಿದ್ದು, ಆ ಮೇರೆಗೆ ಕೆಳ ನ್ಯಾಯಾಲಯವು ಮಾಡಿದಂತಹ ತೀರ್ಪು ಮತ್ತು ಡಿಕ್ರಿ ರದ್ದು ಪಡಿಸಲು ಅರ್ಹವಿರುತ್ತದೆ ಅಂತಾ ಅಭಿಪ್ರಾಯಪಟ್ಟು. ಅಂಶ ನಂ. 1 ಮತ್ತು 2ನ್ನು ಸಕಾರಾತ್ಮಕವಾಗಿ ಅಂತಾ ಉತ್ತರಿಸಿರುತ್ತೇನೆ.

15. ಅಂಶ ಸಂಖ್ಯೆ 3: ಈ ಮೇಲ್ಕಾಣಿಸಿದ ಅಂಶಗಳಲ್ಲಿ ಚರ್ಚಿಸಿರುವ ಕಾರಣಗಳಿಂದಾಗಿ ಈ ಕೆಳಗಿನಂತೆ ಆದೇಶಿಸಲು ವಿದ್ಯುಕ್ತನಾಗಿರುತ್ತೇನೆ;

## ಆದೇಶ

ವಾದಿ/ಮೇಲ್ಮನವಿದಾರರು ದಿವಾಣಿ ಪ್ರಕ್ರಿಯೆ ಸಂಹಿತೆ ಕಲಂ 96 ಸಹವಾಚಕ ಕ್ರಮಾದೇಶ 41 ನಿಯಮ 1 ಮತ್ತು 2ರ ಅಡಿಯಲ್ಲಿ ಸಲ್ಲಿಸಿದ ಮೇಲ್ಮನವಿಯನ್ನು ಪುರಸ್ಕರಿಸಲಾಗಿರುತ್ತದೆ.

ಅಧಿವಿಚಾರಣೆ ನ್ಯಾಯಾಲಯವು ದಿನಾಂಕ 24-03-2016ರಂದು ಅಸಲು ದಾವಾ ಸಂಖ್ಯೆ 01/2013ರಲ್ಲಿ ಹೊರಡಿಸಿದ, ತೀರ್ಪು ಮತ್ತು ಡಿಕ್ರಿಯನ್ನು ರದ್ದುಗೊಳಿಸಿ, ಈ ಕೆಳಗಿನಂತೆ ಮಾರ್ಪಾಡು ಮಾಡಲಾಗಿರುತ್ತದೆ.

ವಾದಿಯು ಸಲ್ಲಿಸಿದಂತಹ ದಾವೆಯನ್ನು ಡಿಕ್ರಿ ಮಾಡಲಾಗಿರುತ್ತದೆ.

ವಾದಿ ದಾವಾದಾಸ್ತಿಗೆ ಮಾಲೀಕ ಮತ್ತು ಸ್ವಾಧೀನದಾರನಿರುತ್ತಾನೆ ಅಂತಾ ಘೋಷಿಸಿ, ಪ್ರತಿವಾದಿಯಾಗಲಿ ವ ಅವರ ತರ್ಫೆ ಇನ್ನಿತರ ಬೇರೆಯಾರೆಯಾಗಲಿ ವಾದಿಯ ಸ್ವಾಧೀನಕ್ಕೆ ಅಡ್ಡಿ ಆತಂಕ ವ, ಹರ್ಕತ್ ಪಡಿಸದಂತೆ ಶಾಶ್ವತ ನಿರ್ಬಂಧಕಾಜ್ಞೆ ಮಂಜೂರು ಮಾಡಲಾಗಿದೆ.

ಸಂಬಂಧಪಟ್ಟ ಅಧಿಕಾರಿಗಳು ವಾದಿಯ ಹೆಸರನ್ನು ದಾವಾದಾಸ್ತಿಯ ಪಹಣಿ ಪತ್ರಿಕೆಯಲ್ಲಿ ಮಂಜೂರು ಮಾಡುವಂತೆ ನಿರ್ದೇಶಿಸಲಾಗಿರುತ್ತದೆ.

ಉಭಯ ಪಕ್ಷಗಾರರು ತಮ್ಮ ಖರ್ಚನ್ನು ತಾವೇ ಭರಿಸಿಕೊಳ್ಳಬೇಕು.

ಮೇಲ್ಕಂಡಂತೆ ಡಿಕ್ರಿ ಬರೆಯಲು ಆದೇಶಿಸಲಾಗಿದೆ.

ಕೆಳನ್ಯಾಯಾಲಯದ ಎಲ್ಲಾ ದಾಖಲೆಗಳನ್ನು ಈ ತೀರ್ಪಿನ ಪ್ರತಿಯೊಂದಿಗೆ ಮರಳಿ ಕಳುಹಿಸುವಂತೆ ಕಛೇರಿಗೆ ನಿದೇಶಿಸಲಾಗಿದೆ.

(ನನ್ನ ಉಕ್ತಲೇಖನದ ಪ್ರಕಾರ ಬೆರಳಚ್ಚುಗಾರರಿಂದ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಅದರಲ್ಲಿದ್ದ ಲೋಪ-ದೋಷಗಳನ್ನು ತಿದ್ದಿ ಇಂದು ದಿನಾಂಕ 31ನೇ ಮೇ-2018 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

(ಪ್ರಭು ಎನ್. ಬಡಿಗೇರ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ.ಗಳು, ಶಹಾಪುರ

.

(ತೀರ್ಪನ್ನು ಇಂದು ಪ್ರತ್ಯೇಕ ಆದೇಶದೊಂದಿಗೆ ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು)

## ಆದೇಶ

ವಾದಿ/ಮೇಲ್ಮನವಿದಾರರು ದಿವಾಣಿ ಪ್ರಕ್ರಿಯೆ ಸಂಹಿತೆ ಕಲಂ 96 ಸಹವಾಚಕ ಕ್ರಮಾದೇಶ 41 ನಿಯಮ 1 ಮತ್ತು 2ರ ಅಡಿಯಲ್ಲಿ ಸಲ್ಲಿಸಿದ ಮೇಲ್ಮನವಿಯನ್ನು ಪುರಸ್ಕರಿಸಲಾಗಿರುತ್ತದೆ.

ಅಧಿವಿಚಾರಣೆ ನ್ಯಾಯಾಲಯವು ದಿನಾಂಕ 24-03-2016ರಂದು ಅಸಲು ದಾವಾ ಸಂಖ್ಯೆ 01/2013ರಲ್ಲಿ ಹೊರಡಿಸಿದ, ತೀರ್ಪು ಮತ್ತು ಡಿಕ್ರಿಯನ್ನು ರದ್ದುಗೊಳಿಸಿ, ಈ ಕೆಳಗಿನಂತೆ ಮಾರ್ಪಾಡು ಮಾಡಲಾಗಿರುತ್ತದೆ.

ವಾದಿಯು ಸಲ್ಲಿಸಿದಂತಹ ದಾವೆಯನ್ನು ಡಿಕ್ರಿ ಮಾಡಲಾಗಿರುತ್ತದೆ.

ವಾದಿ ದಾವಾದಾಸ್ತಿಗೆ ಮಾಲೀಕ ಮತ್ತು ಸ್ವಾಧೀನದಾರನಿರುತ್ತಾನೆ ಅಂತಾ ಘೋಷಿಸಿ, ಪ್ರತಿವಾದಿಯಾಗಲಿ ವ ಅವರ ತರ್ಫೆ ಇನ್ನಿತರ ಬೇರೆಯಾರೆಯಾಗಲಿ ವಾದಿಯ ಸ್ವಾಧೀನಕ್ಕೆ ಅಡ್ಡಿ ಆತಂಕ ವ, ಹರ್ಕತ್ ಪಡಿಸದಂತೆ ಶಾಶ್ವತ ನಿರ್ಬಂಧಕಾಜ್ಞೆ ಮಂಜೂರು ಮಾಡಲಾಗಿದೆ.

ಸಂಬಂಧಪಟ್ಟ ಅಧಿಕಾರಿಗಳು ವಾದಿಯ ಹೆಸರನ್ನು ದಾವಾದಾಸ್ತಿಯ ಪಹಣಿ ಪತ್ರಿಕೆಯಲ್ಲಿ ಮಂಜೂರು ಮಾಡುವಂತೆ ನಿರ್ದೇಶಿಸಲಾಗಿರುತ್ತದೆ.

ಉಭಯ ಪಕ್ಷಗಾರರು ತಮ್ಮ ಖರ್ಚನ್ನು ತಾವೇ ಭರಿಸಿಕೊಳ್ಳಬೇಕು.

ಮೇಲ್ಕಂಡಂತೆ ಡಿಕ್ರಿ ಬರೆಯಲು ಆದೇಶಿಸಲಾಗಿದೆ.

ಕೆಳನ್ಯಾಯಾಲಯದ ಎಲ್ಲಾ ದಾಖಲೆಗಳನ್ನು ಈ ತೀರ್ಪಿನ ಪ್ರತಿಯೊಂದಿಗೆ ಮರಳಿ ಕಳುಹಿಸುವಂತೆ ಕಛೇರಿಗೆ ನಿದೇಶಿಸಲಾಗಿದೆ.

(ಪ್ರಭು ಎನ್. ಬಡಿಗೇರ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ.ಗಳು, ಶಹಾಪುರ